ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಕಛೇರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಎನ್.ಆರ್. ಚೌಕ. ಬೆಂಗಳೂರು-02

ಸಂಖ್ಯೆ:ಮುಆ/ಪಿಆರ್/216/2024-25 ದಿನಾಂಕ:31-12-2024

ಕಛೇರಿ ಆದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರಿಗೆ ಈಗಾಗಲೇ ಪಾವತಿ ಮಾಡಿರುವ ಬಿಲ್ಲುಗಳಲ್ಲಿ ತಡೆಹಿಡಿದಿರುವ ಶೇ.25% ರಷ್ಟು ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಹಾಗೂ ಪಾವತಿಸಲು ಬಾಕಿಯಿರುವ ಬಿಲ್ಲುಗಳನ್ನು ಶೇ.100% ರಷ್ಟು ಪಾವತಿ ಮಾಡುವ ಬಗ್ಗೆ ಸ್ಪಷ್ಟೀಕರಣ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ನಇ 346 ಎಂಎನ್‌ವೈ 2023, ಬೆಂಗಳೂರು, ದಿನಾಂಕ:04-11-2024.

2. ಇದೇ ಆದೇಶದ ಸಮ ಸಂಖ್ಯೆ ದಿನಾಂಕ:13-11-2024.

****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರಿಗೆ ಈಗಾಗಲೇ ಪಾವತಿ ಮಾಡಿರುವ ಬಿಲ್ಲುಗಳಲ್ಲಿ ತಡೆಹಿಡಿದಿರುವ ಶೇ.25% ರಷ್ಟು ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಹಾಗೂ ಪಾವತಿಸಲು ಬಾಕಿಯಿರುವ ಬಿಲ್ಲುಗಳನ್ನು ಶೇ.100% ರಷ್ಟು ಪಾವತಿ ಮಾಡುವ ಸಂಬಂಧ ಉಲ್ಲೇಖಿತ (1)ರ ಸರ್ಕಾರದ ಆದೇಶದಂತೆ ಪಾಲಿಕೆಯಲ್ಲಿ ಅನುಷ್ಠಾನಗೊಳಿಸಲು ಉಲ್ಲೇಖ (2)ರಂತೆ ಷರತ್ತುಗೊಳಪಡಿಸಿ ಪಾವತಿ ಮಾಡಲು ಆದೇಶಿಸಲಾಗಿರುತ್ತದೆ. ಅದರಂತೆ, ಜೇಷ್ಟತೆಯ ಆಧಾರದ ಮೇಲೆ ಪಾವತಿ ಮಾಡಲು ಪಾಲಿಕೆಯ ಅನುದಾನದ ಮತ್ತು ಸರ್ಕಾರದ ಅನುದಾನ ಅಡಿಯಲ್ಲಿ ನಿರ್ವಹಿಸಿದ ಕಾಮಗಾರಿಗಳಿಗೆ ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಈ ಸಂಬಂಧ ದಿನಾಂಕ:23-12-2024ರಂದು ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳೊಂದಿಗೆ ಚರ್ಚಿಸಿದಂತೆ ಉಲ್ಲೇಖಿತದ ಆದೇಶದ ಕ್ರಮ ಸಂಖ್ಯೆ (3)ರಲ್ಲಿ "In short the BBMP shall keep a total of 10% of the work cost as security deposit either in the form of Bank guarantee or in the form of partial money deposit and partial bank guarantee" ಪಡೆಯುವ ಸಂಬಂಧ ಕಾಮಗಾರಿ ನಿರ್ವಹಿಸದೇ ಇರುವ ಮೊತ್ತವನ್ನು ಸೇರಿಸಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಲು ಕಾರ್ಯಪಾಲಕ ಅಭಿಯಂತರರುಗಳು ತಿಳಿಸುತ್ತಿರುವುದಾಗಿ ಪ್ರಸ್ತಾಪಿಸುತ್ತಾ, ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿ ಇರುವುದರಿಂದ, ಕಾಮಗಾರಿ ನಿರ್ವಹಿಸದೇ ಇರುವ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿಯ ಮೊತ್ತವನ್ನು ಪಡೆಯದೇ ಇರುವಂತೆ ಸೂಚಿಸಲು ಕೋರಿರುತ್ತಾರೆ.

ಪು.ತಿ.ನೋ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸದೇ ಇರುವ ಮೊತ್ತವನ್ನು ಹೊರತುಪಡಿಸಿದ ಕಾಮಗಾರಿ ನಿರ್ವಹಣಾ (Work Execution Cost=Bills already paid + present 25% pending bill cost) ಮೊತ್ತಕ್ಕೆ ಉಲ್ಲೇಖಿತ ಆದೇಶದ ಷರತ್ತುಗಳಂತೆ ಭದ್ರತಾ ಠೇವಣಿಯನ್ನು ಪಡೆಯಲು ಸ್ಪಷ್ಟೀಕರಿಸುತ್ತಾ ಹಾಗೂ ಪಾವತಿಸಲು ಬಾಕಿಯಿರುವ ಬಿಲ್ಲುಗಳನ್ನು ಶೇ.100% ರಷ್ಟು ಪಾವತಿ ಮಾಡುವ ಸಂದರ್ಭದಲ್ಲೂ ಸಹ ಇದೇ ರೀತಿ ಕ್ರಮವಹಿಸುವುದು.

ಒಟ್ಟಾರೆಯಾಗಿ ಕಾಮಗಾರಿಯ ಆರಂಭದಲ್ಲಿ ಪಡೆದ ಶೇ.5% ರಷ್ಟು ಭದ್ರತಾ ಠೇವಣಿಯನ್ನು ಹೊರತುಪಡಿಸಿ ಅಂತಿಮ ಬಿಲ್ಲನ್ನು ಪಾವತಿಸುವ ಸಂದರ್ಭದಲ್ಲಿ ಶೇ.5% ರಷ್ಟು ಹೆಚ್ಚುವರಿ ಭದ್ರತಾ ಠೇವಣಿಯನ್ನು ಕಾಮಗಾರಿಯ ಮೊತ್ತಕ್ಕೆ ಪಡೆದುಕೊಂಡಿರುವ ಬಗ್ಗೆ ಖಾತರಿಪಡಿಸಿಕೊಂಡು ಪಾವತಿಗೆ ಕ್ರಮವಹಿಸಲು ಆದೇಶಿಸಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಯೋಜನೆ/ಹಣಕಾಸು) ರವರ ಮುಂದಿನ ಕ್ರಮಕ್ಕಾಗಿ.
3. ಎಲ್ಲಾ ವಲಯಗಳ ಆಯುಕ್ತರುಗಳ ಮುಂದಿನ ಕ್ರಮಕ್ಕಾಗಿ.
4. ಅಪರ ಆಯುಕ್ತರು (ಹಣಕಾಸು) ರವರ ಮಾಹಿತಿಗಾಗಿ.
5. ಪ್ರಧಾನ ಅಭಿಯಂತರರ ಸೂಕ್ತ ಕ್ರಮಕ್ಕಾಗಿ.
6. ಮುಖ್ಯ ಲೆಕ್ಕಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
7. ಎಲ್ಲಾ ವಲಯಗಳ ಮುಖ್ಯ ಅಭಿಯಂತರರರುಗಳ ಸೂಕ್ತ ಕ್ರಮಕ್ಕಾಗಿ.
8. ಎಲ್ಲಾ ವಿಭಾಗೀಯ ಕಾರ್ಯಪಾಲಕ ಅಭಿಯಂತರರುಗಳ ಸೂಕ್ತ ಕ್ರಮಕ್ಕಾಗಿ.
9. ಎಲ್ಲಾ ವಲಯಗಳ ಉಪ ನಿಯಂತ್ರಕರು (ಹಣಕಾಸು) ರವರಿಗೆ ಮಾಹಿತಿಗಾಗಿ.
10. ಕಛೇರಿ ಪ್ರತಿ.